# ಹ್ಯಾಕಥಾನ್ ಪ್ರಶಸ್ತಿ ವಿತರಣೆ



ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ವಿಜೇತರು.

**ಸುರತ್ಕಲ್:** ಇಲ್ಲಿನ ಎನ್‌ಐಟಿಕೆ ಕ್ಯಾಂಪಸ್‌ನಲ್ಲಿ ನಡೆದ 2 ದಿನಗಳ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ 2024 ಫೈನಲ್ ಮುಕ್ತಾಯಗೊಂಡು ವಿಜೇತರನ್ನು ಘೋಷಿಸಿ ಬಹುಮಾನ ವಿತರಿಸಲಾಯಿತು.

ಕಲ್ಲಿದ್ದಲು ಸಚಿವಾಲಯದ ಸಮಸ್ಯೆ ಬಗೆ ಹರಿಸುವಲ್ಲಿ ಹುಬ್ಬಳ್ಳಿಯ ಜೈನ್ ಕಾಲೇಜ್ ಎಂಜಿನಿಯರಿಂಗ್ ಆಂಡ್ ಟೆಕ್ನಾಲಜಿ, ರಾಡೌರ್‌ನ ಸೇಠ್ ಜೈ ಪ್ರಕಾಶ್, ಮುಕುಂದ್ ಲಾಲ್ ಎಂಜಿನಿಯರಿಂಗ್ ಸಂಸ್ಥೆ ಜಂಟಿಯಾಗಿ ವಿಜೇತ ಎಂದು ಘೋಷಿಸಲಾಯಿತು.

ಕಲ್ಲಿದ್ದಲು ಗಣಿಗಳ ಉತ್ಪಾದಕತೆ ,ಸುರಕ್ಷತಾ ನಿರ್ವಹಣೆಯ ಆಧಾರಿತ ಆಪ್ಲಿಕೇಶನ್, ಸಾಫ್ಟ್‌ವೇರ್ ನಿರ್ವಹಿಸಿದ ಮುಂಬೈನ ಸರ್ದಾರ್ ಪಟೇಲ್, ಸಿವಿ ರಾಮನ್ ಗ್ಲೋಬಲ್ ಯೂನಿವರ್ಸಿಟಿ ಜಂಟಿಯಾಗಿ, ಕಲ್ಲಿದ್ದಲು ವಲಯದ ಆರ್ ಆಂಡ್ ಡಿ ವಿಭಾಗದ ಸಮಸ್ಯೆ ಬಗೆ ಹರಿಸುವಲ್ಲಿ ಭೋಪಾಲ್‌ನ ವಿಐಟಿ,ಪುಣೆಯ ಜೆಎಸ್‌ಪಿಎಂನ ರಾಜರ್ಷಿ ಶಾಹು ಎಂಜಿನಿಯರಿಂಗ್ ಜಂಟಿ ವಿಜೇತರೆಂದು ಘೋಷಿಸಿ ಬಹುಮಾನ ವಿತರಿಸಲಾಯಿತು. ಯುವ ವ್ಯವಹಾರ, ಶಿಕ್ಷಣ ಮತ್ತು ಡೋಪಿಂಗ್ ವಿರೋಧಿ ಮಾಹಿತಿಗಾಗಿ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಯಲ್ಲಿ ಚೆನ್ನೈನ ಸಾಯಿರಾಮ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಚೆನ್ನೈ, ಗುಪ್ತಚರ ಮತ್ತು ತನಿಖೆಗಳು ವಿಭಾಗದಲ್ಲಿ ಥಾಣೆಯ ಎಪಿ ಶಾ ಟೆಕ್ನಾಲಜಿ ಯನ್ನು ವಿಜೇತರಾಗಿ ಘೋಷಿಸಲಾಯಿತು.

Hosa Diganta, Date: 14/12/24, p, no - 07